ADVT

# ಯುದ್ಧಕ್ಕೆ ತರಬೇತಿ ಹೊಂದಿದವರಿಗೆ ಕ್ಯಾನ್ಸರ್ ಕೂಡಾ ಗೆಲ್ಲಬಹುದಾದ ಇನ್ನೊಂದು ಯುದ್ಧ.

ನಿರೂಪ ಹಜಾರಿಕಾರವರ ಹೆಸರು ಅವರ ಸ್ನೇಹಿತರು ಮತ್ತು ಪರಿವಾರದವರಿಗೆ ಧೈರ್ಯ, ಕರುಣೆ ಮತ್ತು ಕೊನೆಯಿಲ್ಲದ ಆತ್ಮಸ್ಥೈರ್ಯದ ಪ್ರತೀಕ. ಅವರ ಮಗ ಪ್ರೀತಿ ಮತ್ತು ಹೆಮ್ಮೆ ತುಂಬಿದ ದನಿಯಲ್ಲಿ, ''ಬಾಲ್ಯದಿಂದಲೂ ಅವರು ಬಹಳ ಚುರುಕು, ಸೋಲೊಪ್ಪದ ಮನೋಭಾವದವರು'' ಎನ್ನುತ್ತಾರೆ. ಅವರ ಮಗನ ಈ ಮಾತು ಬಹಳ ಅರ್ಥಪೂರ್ಣ. ಬಹಳ ಅಂದರೆ ಎಷ್ಟು? ಶಾಲೆಯಲ್ಲಿದ್ದಾಗ ನಿರೂಪ ಹಜಾರಿಕ ರವರು ಎನ್ ಸಿ. ಸಿ. ಯಲ್ಲಿದ್ದರು. ಹುಡುಗ ಮತ್ತು ಹುಡುಗಿಯರಲ್ಲಿ ಆಕೆಯೇ ಅತ್ಯುತ್ತಮ ಕೆಡೆಟ್ ಎನಿಸಿಕೊಂಡಿದ್ದರು. ಗಣರಾಜ್ಯೋತ್ಸವದ ಪೆರೇಡ್‌ನಲ್ಲಿ ಉತ್ತರಪೂರ್ವ ರಾಜ್ಯವನ್ನು ಪ್ರತಿನಿಧಿಸುವ ಅವಕಾಶ ಪಡೆದ ಕೆಲವೇ ಅರ್ಹರಲ್ಲಿ ಒಬ್ಬರು. ಇದಾದ ಕೆಲವೇ ಸಮಯದಲ್ಲಿ 1962ರ ಭಾರತ–ಚೀನಾ ಯುದ್ಧ ಆರಂಭವಾಯಿತು. ಎನ್.ಸಿ.ಸಿ ಕೆಡೆಟ್‌ಗಳಿಗೆ ಕಠೋರ ತರಬೇತಿಗೆ ಒಡ್ಡಲಾಯಿತು ಹಾಗೂ ಒಂದೊಮ್ಮೆ ಇತರ ಸೇನಾಬಲಗಳು ವಿಫಲವಾದರೆ ದೇಶದ ಮೂರನೇ ಸಾಲಿನ ರಕ್ಷಣೆಯಾಗಿ ಅವರನ್ನು ಹುರಿಗೊಳಿಸಲಾಯಿತು. ಅವರು ಮನಿಲಾದಲ್ಲಿನ ಒಂದು ಸಾಹಸಮಯ ಪರ್ವತಾರೋಹಣ ಶಿಬಿರಕ್ಕೂ ಆಯ್ಕೆಯಾದರು, ಆದರೆ ಯುದ್ಧ ಆರಂಭವಾದ ಕಾರಣ ಅದು ರದ್ದಾಯಿತು. ನಿರುಪರವರ ಆಕಾಂಕ್ಷೆಗಳು ಸುಮ್ಮನಾಗಲೇ ಇಲ್ಲ. ಮದುವೆಯ ನಂತರ ಸ್ನಾತಕೋತ್ತರ ಪದವಿಗೆ ಸೇರಿದರು. ಆದರೆ ಕುಟುಂಬದ ಕಡೆ ಹೆಚ್ಚು ಗಮನಹರಿಸಬೇಕಾಗಿ ಬಂದದ್ದರಿಂದ ಅದನ್ನು ಪೂರೈಸಲಾಗಲಿಲ್ಲ. ನಂತರ ಅವರು ಬಿ.ಎಡ್ ಓದಿ ಕಾನೂನು ಪದವಿಯನ್ನೂ ಪಡೆದರು. ಮಕ್ಕಳು ''ಅವರು ಜೀವನವನ್ನು ಬಹಳಷ್ಟು ರೀತಿಯಲ್ಲಿ ಜೀವನಕ್ಕಿಂತ ದೊಡ್ಡದಾಗಿಸಿದವರು'' ಎನ್ನುತ್ತಾರೆ. ಕೆಲವು ತಿಂಗಳ ಹಿಂದೆ, ತಮ್ಮ 76ನೇ ವಯಸ್ಸಿನಲ್ಲಿ ತುಂಬು ಜೀವನದಲ್ಲಿ ನಿರತರಾಗಿದ್ದಾಗ, ಅವರ ದೇಹದ ತೂಕ ಇದ್ದಕ್ಕಿದ್ದ ಹಾಗೇ ಕಡಿಮೆಯಾಗತೊಡಗಿತು. ಗುವಾಹಟಿಯಲ್ಲಿ ವಾಸವಾಗಿದ್ದ ಅವರ ಕುಟುಂಬ, ಸಮಯ ಹಾಳು ಮಾಡದೇ ಕೂಡಲೇ ಸ್ಥಳೀಯ ಆಸ್ಪತ್ರೆಯಲ್ಲಿ ಪರೀಕ್ಷೆಗಳನ್ನು ಮಾಡಿಸಿತು.

ತದನಂತರ ಅವರ ಅನ್ನನಾಳದಲ್ಲಿ ಸಣ್ಣದೊಂದು ಗಂಟು ಬೆಳೆದಿರುವುದು ಪತ್ತೆಯಾಯಿತು. ಸಾಧ್ಯವಾದಷ್ಟು ಬೇಗ ಅದಕ್ಕೆ ಚಿಕಿತ್ಸೆ ಮಾಡಬೇಕೆಂದು ಆಕೆಗೆ ಸಲಹೆ ನೀಡಲಾಯಿತು. ಎಷ್ಟು ದೂರವಾದರೂ ಪರವಾಗಿಲ್ಲ, ಆದರೆ ಅತ್ಯುತ್ತಮ ಕ್ಯಾನ್ಸರ್ ಚಿಕಿತ್ಸೆ ಬೇಕೆಂದು ಅವರ ಕುಟುಂಬವು ದೇಶದ ಉದ್ದಗಲಕ್ಕೂ ಹುಡುಕಾಟ ನಡೆಸಿತು. ಅವರ ಬಂಧುವೊಬ್ಬರು ಬೆಂಗಳೂರಿನಲ್ಲಿ ಡಾಕ್ಟರಾಗಿದ್ದು, ಬೆಂಗಳೂರಿನ ಯಲಹಂಕದಲ್ಲಿರುವ ಸೈಟ್‌ಕೇರ್ ಕ್ಯಾನ್ಸರ್ ಆಸ್ಪತ್ರೆಯನ್ನು ಸಂಪರ್ಕಿಸುವಂತೆ ಸಲಹೆ ನೀಡಿದರು. ನಿರುಪರವರ ಮಗ ಆಸ್ಪತ್ರೆಗೆ ಭೇಟಿ ನೀಡಿ ಅಲ್ಲಿನ ಕೆಲವು ಡಾಕ್ಟರುಗಳೊಂದಿಗೆ ಮಾತನಾಡಿದರು. ತಮ್ಮ ತಾಯಿಯ ಚಿಕಿತ್ಸೆಗೆ ಇದು ಸರಿಯಾದ ಸ್ಥಳ ಎಂದು ಅವರಿಗೆ ಮನವರಿಕೆ ಆಯಿತು. ನಿರುಪರವರ ಚಿಕಿತ್ಸೆ ಆರಂಭವಾಗಿ ಈಗ ತಿಂಗಳು ಕಳೆದಿದೆ. ಆಕೆಯ ಆರೋಗ್ಯದಲ್ಲಿ ಸುಧಾರಣೆ ಕಂಡುಬರುತ್ತಿದೆ. ಅವರ ಅನ್ನನಾಳದ ಗಂಟನ್ನು ಶಸ್ತ್ರ ಚಿಕಿತ್ಸೆಯ ಮೂಲಕ ನಿವಾರಿಸಬಹುದಾದರೂ 76ರ ಇಳಿವಯಸ್ಸಿನಲ್ಲಿ ಅದು ಸುರಕ್ಷಿತವಲ್ಲ. ಬದಲಾಗಿ ಅವರಿಗೆ ರೇಡಿಯೋ ಥೆರಪಿ ಮತ್ತು ಕಿಮೋಥೆರಪಿ ಚಿಕಿತ್ಸೆ ನೀಡಲಾಗುತ್ತಿದೆ.

ರೇಡಿಯೋ ಆಂಕಾಲಜಿಯ ಕನ್ಸಲ್ಟೆಂಟ್ ಆಗಿರುವ ಡಾ.ಅಜಯ್ ರಾವ್ ಹೇಳುತ್ತಾರೆ, ''ಶ್ರೀಮತಿ ನಿರುಪ ಹಜಾರಿಕಾ ರವರು ಸ್ಫೂರ್ತಿ, ಶಿಸ್ತು ಮತ್ತು ಹುರುಪಿನ ಮಹಿಳೆ. ಅವರ ಅತ್ಯಂತ ಸ್ಫೂರ್ತಿದಾಯಕ ಅಂಶವೆಂದರೆ, ಪ್ರತಿದಿನ ನಗೆಮುಖದೊಂದಿಗೆ ರೇಡಿಯೋ ಥೆರಪಿ ವಿಭಾಗದವರ ಕುಶಲ ವಿಚಾರಿಸಿಕೊಳ್ಳುತ್ತಿದ್ದರು ಮತ್ತು ರೇಡಿಯೋ ಥೆರಪಿ ಮಾಡಿಸಿಕೊಳ್ಳುವಾಗ ಸಂಗೀತ ಕೇಳುತ್ತಿದ್ದರು. ಅಂತಹವರ ಮಗ ಸೈನ್ಯದಲ್ಲಿ ಅಧಿಕಾರಿಯಾಗಿರುವುದು ಅಚ್ಚರಿಯ ವಿಷಯವೇನಲ್ಲ! ಇಂತಹ ರೋಗಿಗಳಿಗೆ ಚಿಕಿತ್ಸೆ ನೀಡುವುದು ಹೆಮ್ಮೆಯೆನಿಸುತ್ತದೆ. ಬಹಳ ಅಪರೂಪಕ್ಕೆ ನಿರುಪ ಹಜಾರಿಕಾರಂತಹ ಸ್ಫೂರ್ತಿದಾಯಕ ರೋಗಿಗಳಿಗೆ ಚಿಕಿತ್ಸೆ ನೀಡಿದ ತೃಪ್ತಿ ಸಿಗುತ್ತದೆ.

ದಿನ ದಿನಕ್ಕೆ ಹಜಾರಿಕಾರವರ ಅನ್ನನಾಳದ ಗಂಟು ಕರಗುತ್ತಿದೆ ಆದರೆ ಅವರ ಚೈತನ್ಯ ಎಂದಿನಂತೆಯೇ ಹೊಳೆಯುತ್ತಿದೆ. ಅವರು ಸಂಪೂರ್ಣ ಗುಣಮುಖರಾಗುತ್ತಾರೆಯೇ ಎಂಬುದು ಇನ್ನೂ ತಿಳಿಯಬೇಕಾಗಿದೆ. ಆದರೆ, ಕೇವಲ ಎರಡೇ ವರ್ಷಗಳ ಹಿಂದೆ, ತನ್ನ 74ನೇ ವಯಸ್ಸಿನಲ್ಲಿ ಫುಕೇತ್ ನಲ್ಲಿ ಪ್ಯಾರಾಸೈಲಿಂಗ್‌ನ ಮೊದಲ ಅನುಭವ ಪಡೆದಾಕೆ ಇವರು ಎಂದು ಅವರ ಕ್ಯಾನ್ಸರಿಗೆ ತಿಳಿಯಲಿ.



CYTECARE
CANCER HOSPITALS

ಹೆಚ್ಚಿನ ಮಾಹಿತಿಗೆ www.cytecare.comಗೆ ಭೇಟಿ ಕೊಡಿ

ಏರ್‌ಪೋರ್ಟ್ ರಸ್ತೆ, ಯಲಹಂಕ, ಬೆಂಗಳೂರು | 1800 123 6767